## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:-** ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ರೂ. 6000/- ಆದಾಯದ ಮಿತಿಯನ್ನು ಗ್ರಾಮೀಣಾ ಪ್ರದೇಶಗಳಲ್ಲಿ ರೂ.12,000/- ಗ್ರಾಮಿಣಾ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ರೂ.17,000/- ಕ್ಕೆ ಹೆಚ್ಚಿಸಲಾಗಿರುವ ಬಗ್ಗೆ.

**ಓದಲಾಗಿದೆ:-**
1 ಸಚಿವ ಸಂಪುಟದ ಪ್ರಕರಣ ಸಂಖ್ಯೆ:- ಸಿ:199:2011, ದಿನಾಂಕ:- 21.04.2011
2 ಸರ್ಕಾರಿ ಆದೇಶ ಸಂ:-ಅನಾಸ 244 ಡಿಆರ್‌ಎ 2006, ದಿನಾಂಕ:-09.10.2006
3 ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 5 ಎಸ್‌ಡಬ್ಲ್ಯೂ 84, ದಿನಾಂಕ: 5/8 ಮಾರ್ಚ್ 1984.
4 ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 146 ಪಿಹೆಚ್‌ಪಿ 77, ದಿನಾಂಕ:- 07.11.1977.

**ಪ್ರಸ್ತಾವನೆ :**

ಮೇಲೆ ಓದಲಾದ ಉಲ್ಲೇಖ(1) ರನ್ವಯ ಕರ್ನಾಟಕ ಸಚಿವ ಸಂಪುಟವು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಬಾಂಡ್‌ಗಳ ವಿತರಣೆಗಾಗಿ, ವೃದ್ಧಾಪ್ಯ ಪಿಂಚಣಿ ವಿತರಿಸುವ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಎಲ್ಲಾ ಫಲಾನುಭವಿಗಳು ಮೂಲ ಬಿಪಿಎಲ್ ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರ ಎರಡನ್ನೂ ಕಡ್ಡಾಯವಾಗಿ ಹೊಂದಿರಬೇಕು ಎಂಬ ಷರತ್ತನ್ನು ಸುತ್ತೋಲೆಯ ಮೂಲಕ ವಿಧಿಸಿರುವ ಬಗ್ಗೆ ಚರ್ಚಿಸಿ, ಇಂತಹ ನಿರ್ಬಂಧಗಳನ್ನು ದಿನಾಂಕ:- 31.03.2011 ಕ್ಕಿಂತ ಮುಂಚೆ ಪಡೆದಿರುವ ಅಥವಾ ನೋಂದಾಯಿಸಿಕೊಂಡಿರುವ ಫಲಾನುಭವಿಗಳಿಗೆ ಅನ್ವಯ ಆಗಬಾರದೆಂದು ನಿರ್ಧರಿಸಿದೆ, ಮತ್ತು ದಿನಾಂಕ:- 01.04.2011 ರ ನಂತರ ಇಂತಹ ಯೋಜನೆಗಳಿಗೆ ಗುರುತಿಸಬಹುದಾದ ಫಲಾನುಭವಿಗಳು ಬಿಪಿಎಲ್ ಕಾರ್ಡ್‌ನ್ನು ಮಾತ್ರ ಕಡ್ಡಾಯವಾಗಿ ಸಲ್ಲಿಸುವ ಷರತ್ತನ್ನು ನಿಗದಿಪಡಿಸಬೇಕೆಂದು ಸಚಿವ ಸಂಪುಟವು ನಿರ್ಧರಿಸಿತು. ಅದರಂತೆ, ಬಿಪಿಎಲ್ ಕಾರ್ಡ್‌ನ್ನು ಪಡೆಯಲು ಮೇಲೆ ಓದಲಾದ ಉಲ್ಲೇಖ(2) ರನ್ವಯ ಅರ್ಜಿದಾರರ ಆದಾಯ ಮಿತಿಯನ್ನು ರೂ. 12,000 ಗ್ರಾಮೀಣಾ ಪ್ರದೇಶಗಳಲ್ಲಿ ಮತ್ತು ರೂ.17,000/- ನಗರ ಪ್ರದೇಶಗಳಲ್ಲಿ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ ಉಲ್ಲೇಖ (3) ರನ್ವಯ ನಿರ್ಗತಿಕ ವಿಧವಾ ವೇತನದಡಿ ಹಾಗೂ ಉಲ್ಲೇಖ (4) ರನ್ವಯ ಅಂಗವಿಕಲ ವೇತನದಡಿ ಆದಾಯ ಮಿತಿಯನ್ನು ರೂ.6000/-ಗಳು ಎಂದು ನಿಗದಿಪಡಿಸಲಾಗಿರುತ್ತದೆ. ಸಚಿವ ಸಂಪುಟದ ನಿರ್ಣಯದಂತೆ, ಆದಾಯ ಪ್ರಮಾಣ ಪತ್ರದ ಬದಲು ಬಿಪಿಎಲ್ ಪಡಿತರ ಚೀಟಿಯನ್ನು ಮಾತ್ರ ಪರಿಗಣಿಸಲು ತೀರ್ಮಾನಿಸಿರುವ ಹಿನ್ನಲೆಯಲ್ಲಿ ಬಿಪಿಎಲ್ ಪಡಿತರ ಚೀಟಿಯ ಮಾನದಂಡಕ್ಕೆ ಸರಿ ಹೊಂದುವಂತೆ ನಿರ್ಗತಿಕ ವಿಧವಾ ವೇತನದಡಿ ಹಾಗೂ ಅಂಗವಿಕಲ ವೇತನದಡಿ ಪ್ರಯೋಜನ ಪಡೆಯಲು ಆದಾಯ ಮಿತಿಯನ್ನು ಗ್ರಾಮೀಣಾ ಪ್ರದೇಶಗಳಲ್ಲಿ ರೂ.12,000/- ಹಾಗೂ ನಗರ ಪ್ರದೇಶಗಳಲ್ಲಿ ರೂ.17,000/- ಎಂದು ನಿಗದಿಪಡಿಸಿ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

### ಸರ್ಕಾರಿ ಆದೇಶ ಸಂಖ್ಯೆ:- ಕಂ.ಇ.35 ಡಿಎಸ್‌ಪಿ 2011, ಬೆಂಗಳೂರು, ದಿನಾಂಕ:-24-05-2011.

**ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.**

1. ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ಆದಾಯದ ಮಿತಿಯನ್ನು ರೂ. 6000/- (ಆರು ಸಾವಿರದಿಂದ) ದಿಂದ, ಗ್ರಾಮೀಣಾ ಪ್ರದೇಶಗಳಲ್ಲಿ,

ರೂ.12,000/- (ರೂ.ಹನ್ನೆರೆಡು ಸಾವಿರಕ್ಕೆ) ಕ್ಕೆ ಗ್ರಾಮೀಣಾ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ರೂ.17,000/- (ರೂ. ಹದಿನೇಳು ಸಾವಿರಕ್ಕೆ) ಕ್ಕೆ ಹೆಚ್ಚಿಸಲಾಗಿರುತ್ತದೆ.

2. ಅರ್ಜಿದಾರರು ಯೋಜನೆಗಳಡಿ ಮಾಶಾಸನಕ್ಕಾಗಿ ಅರ್ಜಿ ಸಲ್ಲಿಸುವಾಗ ಆದಾಯ ಪ್ರಮಾಣ ಪತ್ರದ ಬದಲು ಬಿಪಿಎಲ್ ಪಡಿತರ ಚೀಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
3. ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನವನ್ನು ಮಂಜೂರು ಮಾಡುವ ಮೊದಲು ಅರ್ಜಿದಾರರು ನೀಡಿರುವ ವಿವರಗಳನ್ನು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ ನಡೆಸಿ, ಅರ್ಜಿದಾರರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರು ಹಾಗೂ ಅರ್ಜಿದಾರರ ಆದಾಯ ಮಿತಿಯು ಯೋಜನೆಯಡಿ ನಿಗದಿ ಪಡಿಸಿರುವಂತೆ ಸರಿಯಾಗಿದೆಯೆಂದು ದೃಢೀಕರಿಸತಕ್ಕದ್ದು.
4. ಮಾಶಾಸನ ಮಂಜೂರಾತಿ ಅಧಿಕಾರಿಗಳಾದ ಸಂಬಂಧಪಟ್ಟ ತಹಸೀಲ್ದಾರರು ಹಾಗೂ ನಾಡಕಛೇರಿಯ ಉಪ ತಹಸೀಲ್ದಾರರು ಬಿಪಿಎಲ್ ಪಡಿತರ ಚೀಟಿ ಹಾಗೂ ರಾಜಸ್ವ ನಿರೀಕ್ಷಕರ ವರದಿಯಲ್ಲಿ ಅನುಮಾನಸ್ಪದ ಅಂಶಗಳಿದ್ದಲ್ಲಿ ಖುದ್ದು ಸಂದರ್ಶನ ನಡೆಸಿ ಯೋಜನೆಗಳಡಿ ಮಾಶಾಸನ ಮಂಜೂರು ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/5/11
(ಎಸ್. ಕಾತ್ಯಾಯಿನಿ ದೇವಿ)
ಪೀಠಾಧಿಕಾರಿಗಳು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ ಕಂದಾಯ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 1000 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಮದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ.ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮುಖ್ಯ ಮಂತ್ರಿಗಳವರ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.
6. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು.
7. ಕಾರ್ಯದರ್ಶಿಗಳು, ವಿಧಾನ ಸಭೆ.
8. ಕಾರ್ಯದರ್ಶಿಗಳು, ವಿಧಾನ ಪರಿಷತ್ತು.
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಎಲ್ಲಾ ಜಿಲ್ಲಾಧಿಕಾರಿಗಳು.
11. ನಿದೇಶಕರು.ಖಜಾನೆ ಇಲಾಖೆ.ಬೆಂಗಳೂರು.
12. ಎಲ್ಲಾ ಉಪ ವಿಭಾಗಧಿಕಾರಿಗಳು
13. ಎಲ್ಲಾ ತಹಸೀಲ್ದಾರರುಗಳಿಗೆ.
14. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
15. ಹೆಚ್ಚುವರಿ ಪ್ರತಿ ಮತ್ತು ಶಾಖಾ ರಕ್ಷಾ ಕಡತ.